

# ಮ್ಯಾಟ್ರಿಮೋನಿಯಲ್ ಮರ!



**Brautigamsciche**
**Dodauer Forest**
**23701 Eutin**
**Germany**

ಮೇಲ್ಕಂಡ ಈ ವಿಳಾಸಕ್ಕೆ ನೀವು ಪತ್ರವನ್ನೇನಾದರೂ ಬರೆದರೆ ಅದು ನಿಶ್ಚಿತವಾಗಿ ತಲುಪುವುದು ಮರದ ಪೊಟರೆಯೊಂದಕ್ಕೆ! ಅರೆರೆ! ಇದೇನು ಮರಕ್ಕೂ ಅಡ್ರೆಸ್ ಇದೆಯಾ ಅಂತ ನೀವು ಹುಬ್ಬೇರಿಸಬಹುದು! ಹೌದು. ಜರ್ಮನಿಯ ಯುಟಿನ್‌ನಲ್ಲಿರುವ ಡೊಡಾಯುರ್ ಕಾಡಿನಲ್ಲಿನ ಓಕ್ ಮರವೊಂದಕ್ಕೆ ಕಳೆದ ನೂರು ವರ್ಷಗಳಿಂದ ಸಾವಿರಾರು ಜನರು ಪತ್ರ ಬರೆದಿದ್ದಾರೆ ಹಾಗೂ ಹಲವಾರು ಜನರು ತಮಗಿಷ್ಟವಾದ ಜೀವನ ಸಂಗಾತಿಗಳನ್ನು ಹುಡುಕಿಕೊಂಡಿದ್ದಾರೆ.

ಸುಮಾರು 500 ವರ್ಷಕ್ಕೂ ಜಾಸ್ತಿ ಹಳೆಯದಾದ ಈ ಮರವು ಬ್ರೈಡ್‌ಗ್ರೂಮ್ ಓಕ್ ಎಂದೇ ಪ್ರಸಿದ್ಧಿಯಾಗಿದೆ. ಐತಿಹ್ಯವೊಂದರ ಪ್ರಕಾರ ಸೆಲ್ವಿಕ್ ಪಾಳೆಯಗಾರನ ಮಗನು ಮರಕ್ಕೆ ಗಂಟೊಂದನ್ನು ಕಟ್ಟಿದ್ದನಂತೆ, ಇದನ್ನು ಕ್ರಿಶ್ಚಿಯನ್ ಕುವರಿ ಬಿಡಿಸಿದಳಂತೆ. ಆಕೆಗೆ ಕೃತಜ್ಞತೆಯನ್ನು ಅರ್ಪಿಸುವ ಸಂಕೇತವಾಗಿ ಈ ಮರವನ್ನು ನೆಟ್ಟನಂತೆ. ಆದರೆ ಇತಿಹಾಸಗಾರರು ಈ ಕಥೆಯನ್ನು ಅಲ್ಲಗಳೆಯುತ್ತಾ, ನಾಸ್ತಿಕರು ಓಕ್ ಮರವನ್ನು ಪೂಜೆ ಮಾಡುವುದನ್ನು ಉತ್ತೇಜಿಸಲೆಂದೇ ಕ್ರಿಶ್ಚಿಯನ್ ಮಿಶನರಿಗಳು ಈ ಮರಕ್ಕೆ ಬ್ರೈಡ್ ಗ್ರೂಮ್ ಓಕ್ ಹೆಸರನ್ನಿಟ್ಟಿದ್ದಾರೆಂದು ವಿಶ್ಲೇಷಣೆ ಮಾಡುತ್ತಾರೆ. ಅದೇನೆ ಸಂಗತಿಗಳಿರಲಿ, ಸಂಗಾತಿಗಳಿಗೋಸ್ಕರ ಪ್ರೇಮ ಪತ್ರಗಳನ್ನು ಬರೆಯುವ ಸಂಪ್ರದಾಯವಂತೂ ಸುಳ್ಳಲ್ಲ!

ನೂರು ವರ್ಷಗಳಿಗೂ ಹಿಂದೆ ಒಟರ್ ಎಂಬ ಹುಡುಗಿಗೆ ಚಾಕೊಲೇಟ್ ತಯಾರಿಸುವವನ ಮಗನಾದ ಸ್ಟುಟ್ಲ್ ಫೆಲ್ಚೆ ಎಂಬಾತನೊಂದಿಗೆ ಪ್ರೇಮಾಂಕುರವಾಯಿತು. ಆದರೆ ಕಾಡಿನ ಮುಖ್ಯಸ್ಥನಾಗಿದ್ದ ಹುಡುಗಿಯ ತಂದೆ ಈ ಸಂಬಂಧವನ್ನು ಬಿಲ್ ಕುಲ್ ಒಪ್ಪಲಿಲ್ಲವಂತೆ. ಅದಕ್ಕಾಗಿ ಅವರು ಗುಟ್ಟಾಗಿ ಪತ್ರ ಬೆರೆಯುತ್ತಾ ಇದೇ ಮರದ ಪೊಟರೆಯಲ್ಲಿ ಹಾಕುತ್ತಾ ವಿನಿಮಯ ಮಾಡಿಕೊಳ್ಳುತ್ತಿದ್ದರಂತೆ. ಹುಡುಗಿಯ ತಂದೆಯೇ ಮಣಿದು ಒಪ್ಪಿದ ನಂತರ ಈ ಜೋಡಿಯು ಮರದ ಕೆಳಗೆ 1891ರ ಜೂನ್ 2 ರಂದು ಮದುವೆಯಾದರಂತೆ. ನಂತರ ಈ ಕಥೆಯು ಜನರ ಬಾಯಿಂದ ಬಾಯಿಗೆ ಹರಡಿ ಜನರು ಒಲವಿನ ಜೋಡಿಯನ್ನು ಪಡೆದುಕೊಳ್ಳುವ ಭರವಸೆಯಿಂದ ಪತ್ರಗಳನ್ನು ಬರೆದು ಪೊಟರೆಯಲ್ಲಿ ಹಾಕಲು ಪ್ರಾರಂಭಿಸಿದರಂತೆ. ಈ ಮರವು ಎಷ್ಟು ಪ್ರಸಿದ್ಧಿ ಪಡೆದುಕೊಂಡಿತೆಂದರೆ ಜರ್ಮನಿಯ ಅಂಚೆ ಕಚೇರಿಯು 1927 ರಲ್ಲಿ ಮರಕ್ಕೆ ತನ್ನದೇ ಸ್ವಂತ ಪೋಸ್ಟಲ್ ಕೋಡ್ ನೀಡಿತಂತೆ! ಅಂದಿನಿಂದ ಮರದ ಖ್ಯಾತಿಯು ಇನ್ನೂ ಹೆಚ್ಚಾಗಿ ಪ್ರಪಂಚದಾದ್ಯಂತ ಪತ್ರಗಳು ಬರಲು ಆರಂಭವಾಯಿತಂತೆ.

ಮರದ ಪೊಟರೆಯು ನೆಲದಿಂದ ಸುಮಾರು ಮೂರು ಮೀಟರ್ ಎತ್ತರದಲ್ಲಿದ್ದು, ಮರದ ಏಣಿಯೇರಿ ಅದನ್ನು ತಲುಪಬಹುದಾಗಿದೆ. ಇದು ಸಾರ್ವಜನಿಕ ಅಂಚೆ ಪೆಟ್ಟಿಗೆಯಾಗಿದ್ದು, ಯಾರು ಬೇಕಾದರೂ ಪತ್ರವನ್ನು ತೆರೆಯಬಹುದು, ಓದಬಹುದು, ತೆಗೆದುಕೊಂಡು ಹೋಗಬಹುದು ಅಥವಾ ಉತ್ತರಿಸಬಹುದಾಗಿದೆ.

ವಧೂವರರ ಹೊಂದಾಣಿಕೆ ಮಾಡುವ ಈ ಮ್ಯಾಟ್ರಿಮೋನಿಯಲ್ ಮರಕ್ಕೆ ದಿನಕ್ಕೆ ಐದರಿಂದ ಆರು ಪತ್ರಗಳು ಬರುತ್ತವೆಯಂತೆ!

■ ವಿದ್ಯಾ ವಿ. ಹಾಲಭಾವಿ